O.S 470/2014

DW-1

ದಿ. 18.01.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ- ವಾದಿಗಳ ಪರ ವಕೀಲರಾದ ಶ್ರೀ.ಸಿ ಎಂ ಜೆ ರವರಿಂದಃ-**

1. ವಾದಿಗಳ ಮೂಲ ಕರ್ತ ಹೊನ್ನೇಗೌಡ ಎಂದರೆ ಸರಿಯಲ್ಲ. ಹಾಗಾದರೆ ವಾದಿಗಳ ಮೂಲ ಕರ್ತ ಯಾರು ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಕೂಕೇಗೌಡ ಎಂದು ನುಡಿಯುತ್ತಾರೆ. ಕೂಕೇಗೌಡರಿಗೆ 4 ಜನ ಮಕ್ಕಳು ಅವರುಗಳೆಂದರೆ ಸಿದ್ದೇಗೌಡ, ಹೊನ್ನೇಗೌಡ, ಕೆಂಪೇಗೌಡ ಮತ್ತು ಸಿದ್ದಲಿಂಗೇಗೌಡ. ಕೂಕೇಗೌಡರ 4 ಜನರ ಮಕ್ಕಳ ಪೈಕಿ ಇರುವ ಹೊನ್ನೇಗೌಡರೇ ವಾದಿಗಳ ತಂದೆ ಎಂದರೆ ಸರಿಯಲ್ಲ. ವಾದಿಗಳ ತಂದೆಯ ಹೆಸರು ನನಗೆ ಗೊತ್ತಿಲ್ಲ. ವಾದಿಗಳ ತಂದೆಯ ಹೆಸರು ಹೊನ್ನೇಗೌಡ ಎಂಬ ವಿಚಾರ ನನಗೆ ಗೊತ್ತಿದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಹೊನ್ನೇಗೌಡರ ಮಕ್ಕಳೇ ಈ ದಾವೆಯನ್ನು ಹೂಡಿರುತ್ತಾರೆ ಎಂದರೆ ಸರಿಯಲ್ಲ. ಈ ದಾವೆಯನ್ನು ಸಿದ್ದೇಗೌಡ ಮತ್ತು ಇತರರು ಸಿದ್ದೇಗೌಡ ಉಃಸಪ್ಪಣ್ಣ ಮತ್ತು ಇತರರ ವಿರುದ್ದ ಹೂಡಿರುತ್ತಾರೆ. ಈ ದಾವೆಯಲ್ಲಿ ಒಟ್ಟು ಎಷ್ಟು ಜನ ವಾದಿಗಳು ಇದ್ದಾರೆ ಮತ್ತು ಎಷ್ಟು ಜನ ಪ್ರತಿವಾದಿಗಳು ಇದ್ದಾರೆ ಎಂಬ ಬಗ್ಗೆ ನನಗೆ ಮಾಹಿತಿ ಇಲ್ಲ. ಈ ದಾವೆಯನ್ನು ವಾದಿಗಳು ಏನು ಪರಿಹಾರ ಕೋರಿ ಹೂಡಿದ್ದಾರೆ ಎಂಬ ಬಗ್ಗೆ ನನಗೆ ಗೊತ್ತಿದೆ. ವಾದಿಗಳು ಈ ದಾವೆಯನ್ನು ಅವರಿಗೆ ಭಾಗ ಬರಬೇಕೆಂದು ಹೂಡಿರುತ್ತಾರೆ. 1 ನೇ ವಾದಿ ಮತ್ತು 1 ನೇ ಪ್ರತಿವಾದಿಗಳು ಅಣ್ಣ ತಮ್ಮಂದಿರ ಮಕ್ಕಳು ಎಂದರೆ ಸರಿ. 1 ನೇ ವಾದಿ ಮತ್ತು 1 ನೇ ಪ್ರತಿವಾದಿಗಳು ಏಕ ಕುಟುಂಬದ ಸದಸ್ಯರು ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರಿದು ಕೂಕೇಗೌಡರ ಕಾಲದಿಂದಲೇ ಅವರು ಭಾಗ ಮಾಡಿಕೊಂಡು

ಬೇರೆ ಬೇರೆಯಾಗಿರುತ್ತಾರೆ ಎಂದು ನುಡಿಯುತ್ತಾರೆ. ಕೂಕೇಗೌಡರು ಜೀವಿತಾವಧಿಯಲ್ಲಿ 1 ನೇ ವಾದಿ ಮತ್ತು 1 ನೇ ಪ್ರತಿವಾದಿ ಒಟ್ಟು ಕುಟುಂಬದಲ್ಲಿ ವಾಸವಿದ್ದರೋ ಇಲ್ಲವೋ ಎಂಬ ಬಗ್ಗೆ ನಾನು ತಿಳಿದುಕೊಂಡಿಲ್ಲ.

2. ಸರ್ವೆ ನಂ.141 ರಲ್ಲಿ 4 ಎಕರೆ 21 ಗುಂಟೆ ಮತ್ತು ಸರ್ವೆ ನಂ.142 ರಲ್ಲಿ 4 ಎಕರೆ 9 ಗುಂಟೆ ಜಮೀನುಗಳು ವಾದಿಗಳ ತಂದೆಯಾದ ಹೊನ್ನೇಗೌಡರ ಹೆಸರಿನಲ್ಲಿ ಖಾತೆ ಇತ್ತು ಎಂದರೆ ಸರಿಯಲ್ಲ. ಸರ್ವೆ ನಂ.141 ಮತ್ತು ಸರ್ವೆ ನಂ.142 ರ ಜಮೀನುಗಳು ಏಕ ಕುಟುಂಬದಲ್ಲಿಯೇ ಇತ್ತು ಅದರಲ್ಲಿ 1 ನೇ ವಾದಿ ಮತ್ತು 1 ನೇ ಪ್ರತಿವಾದಿಯರು ಯಾವುದೇ ವಿಭಾಗ ಮಾಡಿಕೊಂಡಿರಲಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು 2005 ರಲ್ಲಿಯೇ ಆ ಜಮೀನುಗಳಲ್ಲಿ ವಿಭಾಗ ಮಾಡಿಕೊಂಡಿದ್ದರು ಎಂದು ನುಡಿಯುತ್ತಾರೆ. 2005 ರಲ್ಲಿ ವಿಭಾಗ ಮಾಡಿಕೊಂಡಿದ್ದಾರೆ ಎಂದು ತೋರಿಸಲು ಸದರಿ ದಾಖಲೆಯನ್ನು ನೀವೇನಾದರೂ ಈ ದಾವೆಯಲ್ಲಿ ಹಾಜರು ಪಡಿಸಿದ್ದೀರಾ ಎಂದರೆ ಸಾಕ್ಷಿಯು ನಾನು ಹಾಜರು ಪಡಿಸಿಲ್ಲ ಆದರೆ ಸಿದ್ದೇಗೌಡರು ಅಂದರೆ 1 ನೇ ವಾದಿ ನನಗೆ ಆ ಪತ್ರವನ್ನು ತೋರಿಸಿದ್ದರು ಎಂದು ನುಡಿಯುತ್ತಾರೆ. ನಿಮಗೆ 1 ನೇ ವಾದಿ ತೋರಿಸಿದರು ಎಂದು ಹೇಳುವ ವಿಭಾಗ ಪತ್ರ ನೊಂದಣಿಯಾಗಿತ್ತಾ ಅಥವಾ ನೊಂದಣಿ ಆಗಿರಲಿಲ್ಲವಾ ಎಂದರೆ ಸಾಕ್ಷಿಯು ಅದು ನೊಂದಣಿಯಾಗಿರಲಿಲ್ಲ ಎಂದು ನುಡಿಯುತ್ತಾರೆ. 2005 ರ ವಿಭಾಗ ಪತ್ರದಲ್ಲಿ ಕೂಕೇಗೌಡರ 4 ಜನ ಮಕ್ಕಳು 8 ಚಿಲ್ಲರೆ ಜಮೀನನ್ನು ವಿಭಾಗ ಮಾಡಿಕೊಂಡಿದ್ದರು ಆದರೆ ಯಾರು ಯಾರಿಗೆ ಯಾವ ಯಾವ ಸರ್ವೆ ನಂಬರ್ ಗಳಲ್ಲಿ ಎಷ್ಟೆಷ್ಟು ವಿಸ್ತೀರ್ಣದ ಜಮೀನುಗಳು ಹೋಗಿದ್ದವು ಎಂದು ನನಗೆ ಹೇಳಲು ಬರುವುದಿಲ್ಲ. ವಿಭಾಗ ಪತ್ರದ ತಿಂಗಳು ಮತ್ತು ದಿನಾಂಕ ನನಗೆ ಹೇಳಲು ಬರುವುದಿಲ್ಲ.

3. 1ನೇ ವಾದಿಗೆ 2005 ರ ವಿಭಾಗದ ಪ್ರಕಾರ ಯಾವ ಸರ್ವೆ ನಂಬರ್ ನಲ್ಲಿ ಎಷ್ಟು ವಿಸ್ತೀರ್ಣದ ಜಮೀನು ಅವರ ಭಾಗಕ್ಕೆ ಹೋಗಿದೆ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಸರ್ವೆ ನಂ.141/1 ರಲ್ಲಿ 2 ಎಕರೆ 31 ಗುಂಟೆ ಜಮೀನು ಅವರಿಗೆ ಹೋಗಿರುತ್ತದೆ ಎಂದು ನುಡಿಯುತ್ತಾರೆ. ಸರ್ವೆ ನಂ.141/1 ರಲ್ಲಿ 2 ಎಕರೆ 31 ಗುಂಟೆ ಜಮೀನು ವಾದಿಗಳ ಹೆಸರಿಗೆ ವಿಭಾಗದ ಆಧಾರದ ಮೇಲೆ ಖಾತೆ ಮತ್ತು ಪಹಣಿಯಾದ ಬಗ್ಗೆ ದಾಖಲೆಯನ್ನು ನಾನು ಈ ದಾವೆಯಲ್ಲಿ ಹಾಜರು ಪಡಿಸಿರುತ್ತೇನೆ. ವಾದಿಗಳಿಗಾಗಲೀ ಅವರ ತಂದೆಯಾದ ಸಿದ್ದೇಗೌಡರಿಗಾಗಲೀ ಅವರ ಒಟ್ಟು ಕುಟುಂಬದ ಆಸ್ತಿಗಳಲ್ಲಿ ಇದುವರೆಗೂ ಯಾವುದೇ ಹಿಸ್ಸೆ ಸಿಕ್ಕಿಲ್ಲ ಎಂದರೆ ಸರಿಯಲ್ಲ.

4. ವಾದಿಗಳ ತಂದೆಯಾದ ಹೊನ್ನೇಗೌಡರು ಮರಣ ಹೊಂದಿದ ನಂತರ 1ನೇ ಪ್ರತಿವಾದಿ ಅಕ್ರಮವಾಗಿ ಸರ್ವೆ ನಂ.142/1 ರಲ್ಲಿ 20 ಗುಂಟೆ ಜಮೀನು ಮತ್ತು ಸರ್ವೆ ನಂ.141 ರಲ್ಲಿ 1 ಎಕರೆ 10 ಗುಂಟೆ ಜಮೀನನ್ನು ಅಕ್ರಮವಾಗಿ ತಮ್ಮ ಹೆಸರಿಗೆ ಖಾತೆ ಮಾಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಅದೇ ಪ್ರಕಾರ 1ನೇ ಪ್ರತಿವಾದಿಯ ತಮ್ಮನಾದ ಕೆಂಪೇಗೌಡರು ಸಹ ಸರ್ವೆ ನಂ.142/2 ರಲ್ಲಿ 1 ಎಕರೆ 29 ಗುಂಟೆ ಜಮೀನನ್ನು ತನ್ನ ಹೆಸರಿಗೆ ಅಕ್ರಮವಾಗಿ ಖಾತೆ ಮಾಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಈ ರೀತಿ ದಾವಾ ಆಸ್ತಿ ಐಟಂ ನಂ.1 ಮತ್ತು 2 ನ್ನು ತನ್ನ ಹೆಸರಿಗೆ ಖಾತೆ ಬದಲಾವಣೆ ಮಾಡಿಸಿಕೊಂಡ ನಂತರ 1ನೇ ಪ್ರತಿವಾದಿಯು ಆ ಆಸ್ತಿಗಳನ್ನು ದಿನಾಂಕ 18.07.2013 ರ ಕ್ರಯಪತ್ರದ ಅಡಿಯಲ್ಲಿ ನನಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. 1ನೇ ಪ್ರತಿವಾದಿಯ ತಮ್ಮನಾದ ಕೆಂಪೇಗೌಡರು ಮರಣ ಹೊಂದಿರುತ್ತಾರೆ ಎಂದರೆ ಸರಿ. ಸದರಿ ಕೆಂಪೇಗೌಡರು ಮರಣ ಹೊಂದಿದ ನಂತರ ಪೌತಿ ಖಾತೆಯ ಆಧಾರದ ಮೇಲೆ ದಾವಾ ಆಸ್ತಿ ಐಟಂ ನಂ.3 ನ್ನು ಕೆಂಪೇಗೌಡರ ಹೆಂಡತಿಯಾದ ನಿಂಗಮ್ಮನವರು

ತಮ್ಮ ಹೆಸರಿಗೆ ಖಾತೆ ಬದಲಾವಣೆ ಮಾಡಿಸಿಕೊಂಡಿದ್ದರು ಎಂದರೆ ಸರಿ. ಈ ರೀತಿ ತಮ್ಮ ಹೆಸರಿಗೆ ಖಾತೆ ಬದಲಾವಣೆ ಮಾಡಿಸಿಕೊಂಡ ನಂತರ ಸದರಿ ನಿಂಗಮ್ಮನವರು ದಾವಾ ಆಸ್ತಿ ಐಟಂ ನಂ.3 ನ್ನು ದಿನಾಂಕ 05.07.2013 ರ ಕ್ರಯಪತ್ರದಂತೆ ನನಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿ.

5. ದಾವಾ ಆಸ್ತಿಗಳು 1 ರಿಂದ 3 ವಾದಿಗಳ ಪಿತ್ರಾರ್ಜಿತವಾದ ಆಸ್ತಿಗಳು ಎಂದರೆ ಸಾಕ್ಷಿಯು ಅವರ ತಾತನ ಆಸ್ತಿಗಳು ಎಂದು ನುಡಿಯುತ್ತಾರೆ. ನನಗೆ ಬರೆದುಕೊಟ್ಟ ಕ್ರಯಪತ್ರಗಳಲ್ಲಿ ಆ ಜಮೀನುಗಳು ಅವರ ಪಿತ್ರಾರ್ಜಿತವಾದ ಆಸ್ತಿಗಳು ಎಂದು ನಮೂದು ಮಾಡಿರುತ್ತಾರೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನನಗೆ ನನ್ನ ಕ್ರಯಪತ್ರಗಳ ಎಲ್ಲಾ ವಕ್ಕಣೆಗಳ ಬಗ್ಗೆ ಮಾಹಿತಿ ಇರುತ್ತದೆ. ದಾವಾ ಸ್ವತ್ತುಗಳು ವಾದಿಗಳ ಪಿತ್ರಾರ್ಜಿತವಾದ ಸ್ವತ್ತುಗಳು ಮತ್ತು ಅವುಗಳಲ್ಲಿ ವಾದಿಗಳಿಗೂ ಸಹ ಸಮಾನವಾದ ಹಿಸ್ಸೆ ಇದೆ ಎಂಬ ಬಗ್ಗೆ ನನಗೆ ಮಾಹಿತಿ ಇದ್ದರೂ ಸಹ ನಾನು ದಾವಾ ಆಸ್ತಿಗಳನ್ನು ಖರೀದಿಸಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳಲ್ಲಿ ವಾದಿಗಳಿಗೂ ಸಹ ಸಮಾನವಾದ ಹಿಸ್ಸೆ ಇದೆ ಈಗಲೂ ಸಹ ವಾದಿಗಳೇ ದಾವಾ ಸ್ವತ್ತುಗಳಲ್ಲಿ ಸ್ವಾಧೀನಾನುಭವದಲ್ಲಿ ಇದ್ದಾರೆ ಎಂದರೆ ಸರಿಯಲ್ಲ.

ಮುಂದುವರಿದ ಪಾಟೀ ಸವಾಲಿಗಾಗಿ ವಕೀಲರು ಸಮಯ ಕೋರಿದ್ದು ಆಲಿಸಿ ನೀಡಲಾಯಿತು.

ಓ ಹೇ ಕೇ ಸರಿ ಇದೆ

(ರಾಧಾ ಎಸ್ )

ಅ/ಛಿ ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ.,

O.S 470/2014

DW-1

ಕನಕಪುರ .